ನಿಯಮ ೩೩ಳಿರ ಮೇರೆಗೆ

ವೀರ ರಾವಣನ ಚರಿತ ಪುಸ್ತಕವನ್ನು ಖರೀದಿ ಮಾಡುವುದಕ್ಕೆ ಒತ್ತಾಯ

ಶ್ರೀಮತಿ ಸುಮಾ ವಸಂತ,—ಸಗಟು ಪುಸ್ತಕ ಖರೀದಿ ಮಾಡುವ ಸರ್ಕಾರ ಯಾವ ಮಾನದಂಡವನ್ನು ಅನುಸರಿಸುತ್ತಿದೆಯೋ ದೇವರೇ ಬಲ್ಲ. ರಾಜ್ಯದ ಎಲ್ಲ ಜಿಲ್ಲೆಗಳ ಲೇಖಕರ ಪುಸ್ತಕಗಳನ್ನೂ ಖರೀದಿಸಿ ಪ್ರೋತ್ಸಾಹ ನೀಡುವುದು ಅವಶ್ಯ. ಲೇಖಕರಾಗಿ: ಪ್ರಕಾಶಕರಾಗಿ, ಮನೆ ಮನೆಗೆ. ಊರಿಂದ ಊರಿಗೆ ಕಾಲ್ನಡಿಗೆಯಲ್ಲಿ ಪಯಣಿಸಿ: ಪುಸ್ತಕ ಮಾರಿ ಕನ್ನಡ ತಾಯಿಯ ಸೇವೆ ಮಾಡುವ 'ಕವಿಭಕ್ತ' ಎಂಬ ಲೇಖಕರು ತನ್ನ ಕೃತಿ 'ವೀರರಾವಣ ಚರಿತ' ಪುಸ್ತಕದ ಸಗಟು ಖರೀದಿಗೆ ಮನವಿ ಸಲ್ಲಿಸಿದರೂ ಅದಕ್ಕೆ ಬೆಲೆ ಕೊಟ್ಟಿಲ್ಲ. ಬದಲಿಗೆ ದೊಡ್ಡ ದೊಡ್ಡ ಪ್ರಕಾಶನ ಸಂಸ್ಥೆಗಳ ಪುಸ್ತಕಗಳಿಗೇ ಬೇಡಿಕೆ ಸಲ್ಲಿಸಲಾಗುತ್ತಿರುವುದು ತೀರ ಆಶ್ಚರ್ಯ. ಪ್ರಕಾಶನ ಸಂಸ್ಥೆಗಳ ಮುಖ ನೋಡದೆ, ಕೃತಿ ಮೌಲ್ಯ ನೋಡಿ ಖರೀದಿಸುವಂತಾಗಬೇಕು. ಈ ಲೇಖಕರ ಕೃತಿ ಕೊಂಡು ನೆರವು ನೀಡಬೇಕು. ಈಗ ಆದ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯಮಂತ್ರಿ).—ಇದಕ್ಕೆ ಮಾಹಿತಿ ತರಿಸಿಕೊಡುತ್ತೇನೆ.

(ಶ್ರೀ ನೀಲಕಂಠಪ್ಪ ಮತ್ತು ಕೆ. ಎಚ್. ಪಾಟೀಲರು ಹಾಜರಿರಲಿಲ್ಲ).

೩) ಬಿಜಾಪುರ ತಹಸೀಲ್ದಾರರವರು ಕಂದಾಯ ವಸೂಲಾತಿಯಲ್ಲಿ ಬಲತ್ಕಾರ ಮಾಡಿ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ ವಿಜಾಪುರ ಜಿಲ್ಲೆಯ, ವಿಜಾಪುರ ತಹಸಿಲ್ದಾರ್‌ರವರು ೨೬.೪.೮೮ ರಂದು ರಾತ್ರಿ ೮ ಗಂಟೆಗೆ ಬೇರೆ ಯಾವ ರೈತನದೋ ಕಂದಾಯ ಬಾಕಿ ವಸೂಲಾಗಬೇಕೆಂದು ಎಂ. ಎಂ. ಗಿರಿಗಾಂವ, ಶಾಹಾ ಪೇಟೆ ಓಣಿ: ಬಿಜಾಪುರ ೫೮೬೧೧೧ ರವರ ಮನೆಗೆ ತನ್ನ ಸಿಬ್ಬಂದಿಯೊಡನೆ ನುಗ್ಗಿ ಮನೆಯಲ್ಲಿದ್ದ ಹೆಣ್ಣುಮಕ್ಕಳನ್ನು ಬೆದರಿಸಿ ಮನೆ ಮಾಲೀಕ ಇಲ್ಲದಿದ್ದಾಗ ನುಗ್ಗಿ ಬಲಾತ್ಕಾರವಾಗಿ ಒಂದು ತೊಲ ಬಂಗಾರದ ಆಭರಣ ಬೋರಮಳಿ ಹಾಗೂ ೬ ರೂಪಾಯಿ ತೆಗೆದುಕೊಂಡು ಹೋಗಿದ್ದಾರೆ, ಲೂಟಿ ಮಾಡಿದ್ದಾರೆ. ಈ ಬಗ್ಗೆ ದಿನಾಂಕ ೨೮.೪.೮೮ ರಂದು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ೨೬.೪.೮೮ ರಂದು ಪೋಲೀಸ್ ಕಂಪ್ಲೇಂಟ್ ಕೊಟ್ಟು ಗಾಂಧಿ ಚೌಕದ ಪೋಲೀಸ್ ಠಾಣೆಯಲ್ಲಿ ಸಿ. ಆರ್. ನಂ. ೧೫೮.೮೮ (ಅಂಡರ್ ಸೆಕ್ಷನ್ ೯೯ ಐಪಿಸಿ) ರಿಜಿಸ್ಟರ್ ಆಗಿದೆ. ಇಂತಹ ಅನೇಕ ಘಟನೆಗಳನ್ನು ಈ ತಹಸಿಲ್ದಾರ್ ನಡಸಿ ಜನತೆ ರೊಚ್ಚಿಗೆದ್ದು ಡಿವೈಎಸ್‌ಐನವರು ಧರಣಿ ಮಾಡುತ್ತಿದ್ದಾರೆ. ಈ ಬಗ್ಗೆ ಈ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಕಂದಾಯ ಇಲಾಖೆ ಮಂತ್ರಿಗಳ ಹೇಳಿಕೆಯನ್ನು ಕೇಳುತ್ತೇನೆ.?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ವೆಂಕಟರಾವಯ್ಯನವರು ಸರ್ಕಾರದ ಗಮನ ಸೆಳೆದಿದ್ದಾರೆ. ಬೇರೆಯವರ ಸಲುವಾಗಿಯೂ ಸಹಾ ಅವರು ಒತ್ತಾಯ ಮಾಡಬಾರದು. ಈ ಬಗ್ಗೆ ವಿವರವನ್ನು ತರಿಸಿ ನಾನು ಎನ್‌ಕ್ವಯರಿ ಮಾಡಿಸುತ್ತೇನೆ. ಮತ್ತು ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

೩) ಬೆಳಗಾವಿ ನಗರದ ಮಹಾಂತೇಶ ನಗರಕ್ಕೆ ಹೋಗುವ ದಾರಿಯಲ್ಲಿ ಹೆಚ್ಚು ಅಪಘಾತಗಳಿಂ ಸಂಭವಿಸುವುದರಿಂದ ಅಲ್ಲಿ ಓವರ್ ಬ್ರಿಡ್ಜ್ ಕಟ್ಟುವ ಬಗ್ಗೆ

ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ನಗರದ ಮಹಾಂತೇಶ ನಗರದ ಮಹಾಂತೇಶನಗರ ಬಡಾವಣೆಗೆ ಹೋಗುವ ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಯ ಮೇಲೆ ಮೇಲಿಂದ ಮೇಲೆ ಅಪಘಾತಗಳು ಆಗುವುದು ಜನರ ದುಃಖಕ್ಕೆ ಕಾರಣವಾಗಿದೆ.